ಅದನ್ನು ನೋಡಿದ. ಅದನ್ನು ನೋಡಿದ ಕೂಡಲೇ ಸಣ್ಣತಿಮ್ಮಯ್ಯನ ಮನಸ್ಸು ಇದ್ದಕ್ಕಿದ್ದಂತೆ ಅಲ್ಲೋಲ ಕಲ್ಲೋಲವಾಯಿತು. ತನ್ನ ಬಿಳಿಕುರಿಯ ನೆನಪು ಅವನೊಳಗೆ ಒತ್ತರಿಸಿ ಬಂತು. ನಕ್ಷತ್ರಗಳ ನಡುವಿನಿಂದ ಬಂದಿಳಿದ ಬಿಳಿಕುರಿಯನ್ನು ಸಣ್ಣತಿಮ್ಮಯ್ಯ ಇನ್ನೊಮ್ಮೆ ನೋಡಿದ. ಒಮ್ಮೆಲೆ ಬಿಳಿಕುರಿ ಜಿಗಿದು ಅವನ ತೆಕ್ಕೆಯಲ್ಲಿ ಅವಿತುಕೊಂಡಿತು. ಸಣ್ಣತಿಮ್ಮಯ್ಯನ ಹಣೆಯಮೇಲೆ ಸಣ್ಣದಾಗಿ ಬೆವರಹನಿಗಳು ಮೂಡ ತೊಡಗಿದವು. ಅಂದು ಈರಪ್ಪನ ಮುಂದೆ ನನ್ನ ಕುರಿಯೂ ಹೀಗೆಯೇ ನಿಂತಿರಬಹುದಲ್ಲವೆ! ಎನಿಸಿತು. ಅದರ ಮುಗ್ಧ ಕಣ್ಣುಗಳು, ಬಿಳಿಮೋಡದಂಥ ಬಂಡು, ಮೋಟು ಬಾಲ, ಪುಟ್ಟ ಪುಟ್ಟ ಕಾಲುಗಳು, ಗಣೆಯ ದನಿಯಂಥ ಅದರ ಕೊರಳು ಎಲ್ಲವೂ ಅವನ ಕಣ್ಣಮುಂದೆ ಬಂದು ನಿಂತವು. ಅವನಿಗೆ ಏನಾಯಿತೋ ಏನೋ? ಕೂಡಲೇ ತಾನು ಹಿಡಿದಿದ್ದ ಮರಿಯನ್ನು ಮರಳಿ ಗೂಡಿಗೆ ಸೇರಿಸಿ ಹೊರಬಂದ. ಚೂಡಿಯ ಉರಿ ಅವನ ಕಣ್ಣುಗಳಲ್ಲಿ ಕರುಣೆಯ ಬೆಳಕಾಗಿ ಹೊಮ್ಮುತ್ತಿತ್ತು.

ಕಾರ ಅರೆದುಕೊಂಡು, ಸ್ವಾರೆಯಲ್ಲಿ ಬೇಯಿಸಲು ಮಾಂಸಕ್ಕಾಗಿ ಕಾಯುತ್ತಿದ್ದ ಮರಿಯಪ್ಪ, ವಟ್ಟಪ್ಪ ಮತ್ತು ಕುಂಟಪ್ಪ ಸಣ್ಣತಿಮ್ಮಯ್ಯನ ಈ ವರ್ತನೆಗೆ ದಂಗಾಗಿ ಹೋದರು! ಏನೋ ಬಯಸಿ ಬಂದವರಿಗೆ ಏನೋ ಸಿಕ್ಕಿತು ಅನ್ನೊಹಾಗೆ ನಿರಾಶೆಯಿಂದ ಸಣ್ಣತಿಮ್ಮಯ್ಯನನ್ನು ನೋಡಿದ ಕೂಡಲೇ ವಟ್ಟಪ್ಪನಿಗೆ ತಡೆಯಲಾರದ ಸಿಟ್ಟು ಬಂದಿತು. 'ಈ ಯಾಪುಲ್ಲಿ ಕೆಲಸಕ್ಕಾಗಿ ನಮ್ಮ ಕೈಯಲ್ಲಿ ಇದೆಲ್ಲ ಮಾಡುಸ್ತಾ?' ಎಂದು ಬಿರುಮಾತಿನಲ್ಲಿ ಹೇಳಿ, ಒಲೆ ಮೇಲಿದ್ದ ಸ್ವಾರೆಯಿಂದ ಸಣ್ಣತಿಮ್ಮಯ್ಯನನ್ನು ಹೊಡೆಯಲು ಹೋದ. ಅಷ್ಟರಲ್ಲಿ ಕುಂಟಪ್ಪ ಅವನನ್ನು ತಡೆದು 'ಇಷ್ಟಕ್ಕೆಲ್ಲಾ ಹಿಂಗಾಡಿದರೆ ಸರಿಯಾಗಕಿಲ್ಲ! ರವೋಟು ಇರು ನೋಡಾನ, ಸಣ್ಣತಿಮ್ಮಯ್ಯ ಏನು ಮಾಡ್ತಾನೆ!' ಎಂದು ಸಮಾಧಾನದ ಮಾತನ್ನಾಡಿದ. ಆದರೂ ವಟ್ಟಪ್ಪನ ಸಿಟ್ಟು ತಣಿಯಲಿಲ್ಲ. ಅಷ್ಟರಲ್ಲಿ ಸಣ್ಣತಿಮ್ಮಯ್ಯನೇ 'ಯಸಟ್ಕೊ ಬಿಡ್ರಣ್ಣಾ. ನನ್ನ ಮನಸ್ಸು ಏನು ಹೇಳ್ತೋ ಅದನ್ನೇ ಮಾಡ್ದೆ. ನನಗೆ ಏನೂ ಅರಿಯದ ಮರಿನ ಕುಯ್ಯೋದಕ್ಕೆ ಮನಸ್ಸು ಬರಲಿಲ್ಲ. ಅದಕ್ಕೆ ಅದನ್ನು ಅಲ್ಲೇಬಿಟ್ಟೆ' ಎಂದ.

'ಅಂಗಾದ್ರೆ ಇವನ್ನೆಲ್ಲಾ ಯಾಕೆ ತರಿಸ್ತೆ?' ಎಂದು ವಟ್ಟಪ್ಪ ಕಾರ ಇದ್ದ ಸ್ವಾರೆ, ಒಲೆಗುಂಡು, ಪಾತ್ರೆ ಸಟ್ಟುಗ, ಸೌದೆ ಕೊರಡು ಎಲ್ಲವನ್ನೂ ತೋರಿಸಿದ. ಸಣ್ಣತಿಮ್ಮಯ್ಯನಿಗೆ ಅವರ ಕೋಪ ಅರ್ಥವಾಯಿತು. ಇದನ್ನು ಸರಿದೂಗಿಸಲು ಅವನು ಮುಂದಾದ 'ನೋಡ್ರಣ್ಣಾ, ಒಂದು ಕೆಲ್ಸ ಮಾಡಾನ. ಈಗ ನಮ್ಮ ಕುರಿಗೂಡಿನಲ್ಲಿ ಎಂಟ್ಹತ್ತು ಕುರಿಪಟ್ಲ ಅವೆ. ಅವುಗಳ ಬೀಜಗಳನ್ನು ತೆಗೆದುಕೊಡ್ತೀನಿ. ಅದರಾಗೆ ಸಾರು ಮಾಡಿ ಉಂಬೊವರಂತೆ! ಹೆಂಗೂ ಕುಂಟಪ್ಪ ಹಟ್ಟಿಯಿಂದ ಹಿಟ್ಟನಮುದ್ದೆ ತಂದವನೆ!' ಎಂದು ಹೇಳಿದ. ಏನೂ ಇಲ್ಲದ್ದಕ್ಕಿಂತ ಇದೇ ವಾಸಿ ಅಂತ ತಿಳಿದು ಆ ಮೂವರು ಅವನ ಮಾತಿಗೆ ಒಪ್ಪಿದರು. 'ಮೂಳಿಲ್ಲದ ಬಾಡು ಅದೆಂಥ ಬಾಡೊ ತಗೆಯೋ ಸಣ್ಣ!' ಎಂದು ತನಗಿದ್ದ ಅಸಮಧಾನವನ್ನು ವಟ್ಟಪ್ಪ ಹೊರಹಾಕಿದ. ಮರಿಯಪ್ಪ 'ಯಸಟ್ಕೊ ಬಿಡೊ ಯಣ್ಣ, ಕುಂಟಪ್ಪಗೆ ಎಂಗೂ ಹಲ್ಲಿಲ್ಲ, ಅವನ ಬಾಯಿಗೆ ಬಾಡು ಮಿದುವಾಗಿರುತ್ತದೆ' ಎಂದು ಕುಂಟಪ್ಪನ ಹೆಸರು ಹೇಳಿ ತನ್ನ ಸಮ್ಮತಿಯನ್ನು ಸೂಚಿಸಿದ. ಆದರೆ ಅವರಿಗಿನ್ನೂ ಇದಕ್ಕಿಂತಾ ಹೆಚ್ಚಿನದು ಬೇಕಿತ್ತು!

ಸಣ್ಣತಿಮ್ಮಯ್ಯ ಅಲ್ಲೇ ಮೋಟುಗೋಡೆ ಮೇಲಿದ್ದ ಗೋಕಲ್ಲನ್ನು ಇನ್ನೊಂದು ಗೋಕಲ್ಲಿಗೆ ಉಜ್ಜಿ ಚೂಪು ಮಾಡಿದ. ಒಂದು ಪಟ್ಲ ಮರಿಯನ್ನು ಎಳೆದುಕೊಂಡು ಬಂದು, ಅದನ್ನು ನೆಲಕ್ಕೆ ಅಂಗಾತ ಕೆಡವಿ ಅದರ ಬೀಜ ಹಿಡಿದು, ಗೋಕಲ್ಲಿಂದ ಒಂದು ಸಣ್ಣ ಗೆರೆಯಷ್ಟು ಕುಯ್ದು ಅದರೊಳಗಿನಿಂದ ಪಟ್ಲಿಯ ಬೀಜ ತಗೆದು ಸ್ವಾರೆವೊಳಕ್ಕೆ ಹಾಕಿದ. ಕೊಯ್ದಿದ್ದ ಜಾಗವನ್ನು ಈಚಲುಗರಿಯಿಂದ ಕಟ್ಟಿದ. ಹೀಗೆ ಬೀಜ ಕುಯ್ಯುವಾಗ ಕುರಿಪಟ್ಲಗಳು ಕರ್ರರೋ.. ಎಂದು ಹಟ್ಟಿಯೇ ಎದ್ದು ಬರುವಂತೆ ಅರಚುತ್ತಿದ್ದವು. ಹೀಗೆ ಏಳೆಂಟು ಕುರಿಗಳ ಬೀಜ ತೆಗೆದು ಅದರಲ್ಲೇ ಪಟ್ಲಬೀಜದ ಸಾರು ಮಾಡಿಕೊಂಡು ಪಟ್ಟಾಗಿ ತಿಂದು ತಮ್ಮ ತಮ್ಮ ಹಟ್ಟಿಗಳಿಗೆ ಹೋದರು. ಅವರಲ್ಲಿ ವಟ್ಟಪ್ಪನೆ ಎಲ್ಲರಿಗಿಂತ ಹೆಚ್ಚಾಗಿ ಹಾಕಿಸಿಕೊಂಡು ತಿಂದಿದ್ದ.

* * *

ಅದೊಂದು ಸಂತಸದ ಬೆಳಗು. ಕುರಿಗೂಡಿನ ಮುಂದೆ ಕೊನೆಯ ಪರೀಕ್ಷೆ. ಸಣ್ಣತಿಮ್ಮಯ್ಯ ಅಗಲೇ